ಅಸಲು ದಾವೆ ಸಂಖ್ಯೆ -161/2018
ಪಿ.ಡಬ್ಲ್ಯೂ - 03
ದಿನಾಂಕಃ 12-02-2026
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ. ಎನ್ ಎಸ್ ಪಿ ವಕೀಲರಿಂದ</u>

ನಿಮ್ಮ ಸಾಕ್ಷ್ಯ ಪ್ರಮಾಣ ಪತ್ರಕ್ಕೆ ಯಾರು ಮಾಹಿತಿ ನೀಡಿರುತ್ತಾರೆ ಎಂದರೆ ನಾನೇ ನೀಡಿರುತ್ತೇನೆ. ದಾವಾ ಆಸ್ತಿ ನಂಬರ ಸರ್ವೆ ನಂ. 87/1, ಪಂಚಾಯತಿ ಆಸ್ತಿ ನಂ. 468. ಚಕ್ಕಬಂದಿ ಪೂರ್ವಕ್ಕೆಃ ಶಣ್ಮುಖಗೌಡ ಪಾಟೀಲ ರವರ ಆಸ್ತಿ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆಃ ಸುರೇಶ ಶಂಭಣ್ಣ, ದಕ್ಷಿಣಕ್ಕೆ ವಾದಿಯರ ಆಸ್ತಿ. ನಿಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ವಾದಿಯ ದಾವಾ ಆಸ್ತಿಯ ದಕ್ಷಿಣ ದಿಕ್ಕಿಗೆ ಪ್ರತಿವಾದಿಯರು ಅತೀಕ್ರಮೀಸಿ ತಂತಿ ಬೇಲಿ ಹಾಕಲು ಪ್ರಯತ್ನಿಸಿರುತ್ತಾರೆ ಎಂದು ಬರೆಸಿದ್ದೀರಿ ಎಂದರೆ ಹೌದು ಎಂದು ನುಡಿಯುತ್ತಾರೆ. ಎಷ್ಟು ಆಸ್ತಿ ಅತೀಕ್ರಮಣ ಮಾಡಲು ಬಂದಿದ್ದರು ಎಂದರೆ ವಾದಿಯ ಮನೆಯಿಂದ 12 ಪೂಟ. ನೀವು ವಾದಿಯ ಮನೆಯನ್ನು ಅಳತೆ ಮಾಡಿದ್ದೀರಿ ಎಂದರೆ ಅಳತೆ ಮಾಡಿಲ್ಲ ನೋಡಿದ್ದೇವೆ. ಹಾಗಾದರೆ ವಾದಿಯರು ದಕ್ಷಿಣ ದಿಕ್ಕಿಗೆ 12 ಪೂಟ ಬಿಟ್ಟಿದ್ದಾರೆ ಎಂದು ಯಾವ ಆಧಾರದ ಮೇಲ ಹೇಳುತ್ತಿದ್ದೀರಿ ಎಂದರೆ ಅಲ್ಲಿ ಟ್ರಾಕ್ಟರ ಓಡಾಡುತ್ತದೆ. ಟ್ರಾಕ್ಟರ ಓಡಾಡುವ ಬಗ್ಗೆ ದಾರಿ ಗುರುತು ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು 1996 ರಲ್ಲಿ ಖರೀದಿಸಿದ್ದರು ಎಂದು ನುಡಿದಿದ್ದು ಆ ವೇಳೆಯಲ್ಲಿ ನಿವು ಏನಾದರೂ ಇದ್ದರಾ ಎಂದರೆ ಇರಲಿಲ್ಲ ಮುಂದುವರೆದು ನಮ್ಮ ತಂದೆಯವರು ಇದ್ದರು. ಖರೀದಿ ಎಷ್ಟು ಗುಂಟೆ ಮತ್ತು ಎಷ್ಟು ಹಣಕ್ಕೆ ಖರೀದಿಸಿದ್ದಾರೆ ಎಂದರೆ 5 ಗುಂಟೆ ಇರುತ್ತದೆ ಹಣ ಗೊತ್ತಿಲ್ಲ. 5 ಗುಂಟೆ ಎಂದು ಯಾರು ಹೇಳಿದರು ಎಂದರೆ ಉತಾರವನ್ನು ನೋಡಿರುತ್ತೇನೆ. ಸದರಿ ಆಸ್ತಿಯನ್ನು ಯಾರಿಂದ ವಾದಿಯರು ಖರೀದಿ ಹಿಡಿದರು ಎಂದರೆ, ಪ್ರತಿವಾದಿಯರಿಂದ ಖರೀದಿ ಹಿಡಿದಿರುತ್ತಾರೆ. ಅಳತೆ ಮಾಡುವಾಗ ನೀವು ಅಲ್ಲಿ ಇದ್ದೀರಾ ಎಂದರೆ ಇದ್ದೇನು.

ಸದರಿ ದಾವಾ ಆಸ್ತಿಯನ್ನು ಪ್ರತಿವಾದಿಯರು ಬನ್ ಶೇತ್ಕಿ ಮಾಡಿಸಿ ಖರೀದಿ ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಬಿನ್ ಶೇತ್ಕಿ ಆದರೆ ಮಾತ್ರ ಪಂಚಾಯತಿಯಲ್ಲಿ ನಂಬರ ಬರುತ್ತದೆ ಎಂದರೆ ಸರಿ. ಒಟ್ಟು ಪ್ರತಿವಾದಿಯರು ಆಸ್ತಿಯಲ್ಲಿ 9 ಪ್ಲಾಟಗಳನ್ನು ಮಾಡಿದ್ದಾರೆ ಎಂದರೆ ಸರಿ. 9 ನೇ ಪ್ಲಾಟನ್ನು ಪ್ರತಿವಾದಿಯರೇ ಇಟ್ಟು ಕೊಂಡಿದ್ದಾರೆ ಸರಿ. 9 ನೇ ಪ್ಲಾಟ್ 11 ಗುಂಟೆ 14 ಆಣೆ ಇದೆ ಎಂದರೆ ಸರಿ. ಸದರಿ ಪ್ಲಾಟ್ ನಲ್ಲಿ ವಾದಿಗೆ ಹಕ್ಕು ಇಲ್ಲ ಎಂದರೆ ಅವರು ಖರೀದಿ ಹಿಡಿದ 5 ಗುಂಟೆ ಆಸ್ತಿಯಲ್ಲಿ ಮಾತ್ರ ಹಕ್ಕು ಇದೆ ಅದಕ್ಕಿಂತ ಹೆಚ್ಚು ಇರುವ ಆಸ್ತಿಯಲ್ಲಿ ಹಕ್ಕು

ಇಲ್ಲ. ಅಳತೆ ಮಾಡಲು ಬಂದಾಗ ನೀವು ಇದ್ದರಾ ಎಂದರೆ ಇದ್ದೇನು. ಪ್ರತಿವಾದಿಯರ ಆಸ್ತಿಯನ್ನು ವಾದಿಯರು ಅತಿಕ್ರಮಿಸಿದ್ದಾರೆ ಎಂದು ವರದಿ ನೀಡಿದ್ದಾರೆ ಆ ವಿಷಯ ನಿಮಗೆ ಗೊತ್ತಾ ಎಂದರೆ ನನಗೆ ಗೊತ್ತಿಲ್ಲ. ವಾದಿಯರು ಪ್ರತಿವಾದಿಯರ ಆಸ್ತಿಯನ್ನು ಅತಿಕ್ರಮಣ ಮಾಡಿ ಕಲ್ಲು ನಿಲ್ಲಿಸಿದ್ದಾರೆ ಎಂದರೆ ಅಲ್ಲಿ ಹಳೆಯ ಕಲ್ಲು ಇದೆ. ಹಳೆ ಕಲ್ಲಿಗೂ ಮತ್ತು ವಾದಿಯರ ಗೋಡೆಗೂ ಎಷ್ಟು ಅಂತರ ಇದೆ ಎಂದರೆ ನಿಖರವಾಗಿ ನನಗೆ ಗೊತ್ತಿಲ್ಲ. ನೀವು ಹೇಳುವ ಪ್ರಕಾರ ವಾದಿಯರ 12 ಪೂಟ ಯಾವುದೇ ಜಾಗ ಇಲ್ಲ ನೀವು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ವಾದಿಯರ ಮನೆಯ, ಹಿತ್ತಲ ಮತ್ತು ವಹಿವಾಟು ಎಷ್ಟು ಉದ್ದ – ಅಗಲ ಇದೆ ಎಂದು ನಿಖರವಾಗಿ ಹೇಳಲು ಆಗುತ್ತದೆಯಾ ಎಂದರೆ ಇಲ್ಲ. ವಾದಿಯರು ಹೇಳಿದ ಪ್ರಕಾರ 12 ಪೂಟ ಎಂದು ನುಡಿಯುತ್ತಿದ್ದೀರಿ ಎಂದರೆ ಸರಿ. ನೀವು ಮತ್ತು ವಾದಿಯರು ಆತ್ಮೀಯರು ಎಂದರೆ ಸರಿ. ಆ ಕಾರಣಕ್ಕಾಗಿ ಅವರು ಹೇಳಿದ ಪ್ರಕಾರ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮಗೆ ಈ ಜಾಗದ ಬಗ್ಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರು ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೂ ಮತ್ತು ನಿಮಗೆ ವೈಮನಸ್ಸು ಇದೆ ಎಂದರೆ ಅವರು ನಮ್ಮ ಜಾಗವು ಸಹ ಒತ್ತುವರಿ ಮಾಡಿರುತ್ತಾರೆ. ಚೆನ್ನಾಗಿಯೇ ಇದ್ದೇವೆ. ಪ್ರತಿವಾದಿಯರು ನಿಮ್ಮ ಆಸ್ತಿಯನ್ನು ಅತಿಕ್ರಮಣ ಮಾಡಿದ್ದಾರೆ ಎಂಬ ಸುಳ್ಳು ಮಾಹಿತಿಯೊಂದಿಗೆ ವಾದಿಯೊಂದಿಗೆ ಮಿಲಾಪೆಯಾಗಿಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಬೇಲಿ ಹಾಕಲು ಯಾವಾಗ ಬಂದಿದ್ದರು ಎಂದರೆ ದಿಃ 21-05-2018. ಬೇಲಿ ಹಾಕಿದ ಬಗ್ಗೆ ಏನಾದರೂ ದಾಖಲೆ ಇದೆಯಾ ಎಂದರೆ ಇಲ್ಲ. ನೋಡಿದಕ್ಕೆ ಹರಕತ್ ಮಾಡಿರುತ್ತಾರೆ. ನಿಮಗೆ ವಾದಿಯರು ಕರೆದುಕೊಂಡು ಬಂದಿದ್ದಾರೆ ಎಂದರೆ ಸರಿ. ಮುಂದುವರೆದು ಹೀಗೆ ಹೇಳೆಬೆಕೆಂದು ಅವರು ಹೇಳಿಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.